



ಅರುಣ ಪಿ. ಭಟ್ಟ

## ವಾರಭವಿಷ್ಯ 10.9.2020ರಿಂದ 16.9.2020ರವರೆಗೆ




ಬಹುದಿನದಿಂದ ನಿಮ್ಮ ನಿರೀಕ್ಷೆಗಳು ಸಾಕಾರಗೊಳ್ಳುತ್ತವೆ. ಮಕ್ಕಳ ಕೆಲಸದ ಸಮಸ್ಯೆ ಬಗೆಹರಿಯುವುದು. ಸರ್ಕಾರದಿಂದ ಬರುವ ಹಣ ಸಕಾಲಕ್ಕೆ ಬರುವುದು. ಸಂಘ ಸಂಸ್ಥೆಗಳಿಂದ ನಿರೀಕ್ಷಿತ ಲಾಭವಿದೆ. ವಾರಾಂತ್ಯದಲ್ಲಿ ಅನಿರೀಕ್ಷಿತ ಜನವಿರೋಧವನ್ನು ಎದುರಿಸಬೇಕಾಗುತ್ತದೆ. ಮಕ್ಕಳ ಶೈಕ್ಷಣಿಕ ಪ್ರಗತಿ ಸಮಾಧಾನ ಉಂಟು ಮಾಡುವುದು. ಶುಭದಿನ: 15. ಆದಿತ್ಯ ಹೃದಯ ಪಠಿಸಿರಿ.




ವಾಹನ ಖರೀದಿಯಲ್ಲಿ ಜಾಗ್ರತೆ ವಹಿಸಿ. ಬಹುದಿನದ ಸಾಮಾಜಿಕ ಸ್ಥಾನಮಾನದಲ್ಲಿ ಪ್ರಗತಿ ಸಾಧಿಸುವಿರಿ. ಲೇಖಕರಿಗೆ ಶುಭವಾರ್ತೆ ಸಿಗಲಿದೆ. ಆರೋಗ್ಯ ಸುಧಾರಣೆ. ವಿವಾಹಾಪೇಕ್ಷಿಗಳಿಗೆ ಉತ್ತಮ ಅವಕಾಶ. ಹೊಸಮನೆ ಕೆಲಸಗಳು ಅಭಾದಿತವಾಗಿ ನಡೆಯುತ್ತವೆ. ವಾರಾಂತ್ಯದಲ್ಲಿ ಹೊಸ ಕೆಲಸದ ಆಲೋಚನೆ ನಡೆಸಲಿದ್ದೀರಿ. ಶುಭದಿನ: 14. ವಿಷ್ಣು ಸಹಸ್ರನಾಮ ಸ್ತೋತ್ರ ಪಠಿಸಿರಿ.




ಪ್ರಾರಂಭದಲ್ಲಿ ಕಾಲುನೋವು ಉಲ್ಬಣಗೊಳ್ಳುವುದು. ನೆಂಟರ ಆಗಮನದಿಂದ ಮಹತ್ವದ ಚರ್ಚೆ ನಡೆಯಲಿದೆ. ನೀವು ತುಂಬ ದಿನಗಳಿಂದ ನಿರೀಕ್ಷಿಸಿದ್ದ ಕೆಲಸಗಳು ಫಲಪ್ರದವಾಗುತ್ತವೆ. ಸಹೋದರರ ನೈಜಮುಖದ ಪರಿಚಯವಾಗುವುದು. ಕೆಲಸದವರಿಂದ ಸಹಾಯ. ವೈಯಕ್ತಿಕವಾಗಿ ಹಣಕಾಸಿನ ತೊಂದರೆ ಎದುರಿಸಬೇಕಾಗಬಹುದು. ಖರೀದಿ ವಿಕ್ರಿಯಲ್ಲಿ ಲಾಭ. ಶುಭದಿನ: 10. ನಾಗ ಪ್ರತಿಮಾ ಪೂಜೆ ಮಾಡಿರಿ.




ಅಸಭ್ಯ ಜನರ ಕುಟುಂಬ ಪ್ರವೇಶದಿಂದ ಕಿರಿಕಿರಿ ಆಗುತ್ತದೆ. ತಂದೆಯೊಡನೆ ಮನಸ್ತಾಪ ಸಾಧ್ಯತೆಯೂ ಇದೆ. ವಾಹನ ದುರಸ್ತಿ ಕಾರ್ಯ ಇಲ್ಲವೆ ವಾಹನ ಕಳ್ಳತನವಾಗುವ ಸಾಧ್ಯತೆ. ಕೃಷಿಮೂಲದಿಂದ ಧನಲಾಭ ಪ್ರಾಪ್ತವಾಗಲಿದೆ. ನಿಮ್ಮ ಕಾರ್ಯಗಳು ಜನಮನ್ನಣೆ ಗಳಿಸಲಿವೆ ಸಾಮಾಜಿಕ ಯಶಸ್ಸು ಲಭಿಸುತ್ತದೆ. ವಾರಾಂತ್ಯದಲ್ಲಿ ಸಂತೋಷ ಸಿಗುತ್ತದೆ. ಶುಭದಿನ 12. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಮಾನಸಿಕ ಸ್ವಾಸ್ಥ್ಯ ಕೆಡುವ ಘಟನೆ ಜರುಗುವುದು. ಹೊಟ್ಟೆ ನೋವಿನ ಉಪದ್ರಗಳು ಕಾಣಿಸಲಿವೆ. ಅವಮಾನಕರ ಪ್ರಸಂಗ ಬರಬಹುದು. ದೈಹಿಕ ಆರೋಗ್ಯ ಸುಧಾರಿಸುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯ ಅಧಿಕಾರಿಗಳಿಂದ ಪ್ರಶಂಸೆ ವ್ಯಕ್ತವಾಗುತ್ತದೆ. ಹಣಕಾಸಿನ ಸಮಸ್ಯೆ ಬಗೆಹರಿಯುತ್ತದೆ. ಶುಭದಿನ: 14. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಹಲವು ಖರ್ಚುಗಳು ಮೇಳೈಸಿ ಬರಲಿವೆ. ಅನಿರೀಕ್ಷಿತ ಪ್ರವಾಸವನ್ನು ಕೈಗೊಳ್ಳುತ್ತೀರಿ. ಬಂಧುಗಳ ವಿವಾಹ ಕಾರ್ಯಕ್ಕೆ ನೆರವಾಗುವದರಿಂದ ಸಂತಸ ಪ್ರಾಪ್ತಿಯಾಗುತ್ತದೆ. ನೀವು ನಿಮ್ಮ ಕೆಲಸಗಳಿಗೆ ನೇಮಿಸಿಕೊಂಡ ಕೆಲಸಗಾರರು ಕೈಕೊಡಬಹುದು. ಆ ಚಿಂತೆಯಿದ್ದರೂ ಕೌಟುಂಬಿಕ ಸುವಾರ್ತೆಯನ್ನು ಕೇಳಲಿದ್ದೀರಿ. ಶುಭದಿನ: 11. ಲಕ್ಷ್ಮೀ ನಾರಾಯಣ ಹೃದಯ ಪಠಿಸಿರಿ.




ನಿಮ್ಮ ಆಸೆಗಳು ಕೈಗೂಡುತ್ತವೆ. ಎಲ್ಲ ಮೂಲಗಳಿಂದ ಧನಲಾಭ ಪ್ರಾಪ್ತಿಯಾಗಲಿದೆ. ಜೀವನದ ಮಹತ್ವಾಕಾಂಕ್ಷೆ ಪೂರ್ಣಗೊಳ್ಳುವ ಸಮಯ. ಹಳೆಯ ಮಿತ್ರರು ಜೊತೆಯಾಗುವರು. ಸಂತಸ ಸಮಾರಂಭಕ್ಕಾಗಿ ಖರ್ಚು ಹೆಚ್ಚು ಮಾಡುತ್ತೀರಿ. ಹೊಸ ವಿವಾಹಿತರಿಗೆ ಸಂತಾನ ಪ್ರಾಪ್ತಿಯ ಸೂಚನೆ ಸಿಗಲಿದೆ. ಶುಭದಿನ: 10. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹಲವು ದಿನಗಳಿಂದ ಬಯಸಿದ ಅಧಿಕಾರ ಪ್ರಾಪ್ತಿಯಿಂದ ಸಂತಸ. ವಿಶೇಷ ವಸ್ತ್ರ ಖರೀದಿ ಸಾಧ್ಯತೆ. ಕ್ರೀಡಾಪಟುಗಳಿಗೆ ಉತ್ತಮ ಅವಕಾಶ. ಕೌಟುಂಬಿಕ ಖರ್ಚು ಹಿಡಿತಕ್ಕೆ ಬರುವುದು. ಇದರ ಜೊತೆಗೆ ನಿಮಗೆ ಬರಬೇಕಾದ ಹಣ ಮರಳಿ ಬರಲಿದೆ. ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತದೆ. ಕೃಷಿ ಚಟುವಟಿಕೆಯಲ್ಲಿ ಯಶಸ್ಸು. ಶುಭದಿನ: 12. ಶನಿಸ್ತೋತ್ರ ಪಠಿಸಿರಿ.




ಬಂಧುಗಳ ಸಹಕಾರದಿಂದ ಸಂಕಟ ಮುಕ್ತಿಯಾಗುತ್ತದೆ. ನೆರವು ಮತ್ತು ಸಮಸ್ಯೆಯ ಮುಕ್ತಿಯಿಂದ ಮನಸ್ಸು ನಿರಾಳವಾಗುತ್ತದೆ. ಪತ್ನಿಯ ಮನೋಕಾಮನೆ ಪೂರ್ಣವಾಗುವುದು. ದೂರಪ್ರವಾಸಕ್ಕೆ ಸಿದ್ಧತೆ ಮಾಡಿಕೊಳ್ಳುತ್ತೀರಿ. ಮಕ್ಕಳಿಂದ ಆನಂದ ಲಭಿಸಲಿದೆ. ನಿಮ್ಮ ಜನಮೆಚ್ಚುವ ಕೆಲಸ ಕಾರ್ಯದಿಂದ ಪ್ರಶಂಸೆ ನುಡಿ ಕೇಳಿಬರಲಿದೆ. ಶುಭದಿನ: 11. ಕಾಲಭೈರವನ ಸೇವೆ ಮಾಡಿರಿ.




ಹಲವು ತಾಪತ್ರಯಗಳ ನಡುವೆಯೂ ಹಮ್ಮಿಕೊಂಡ ಕಾರ್ಯವನ್ನು ಮಾಡಿ ಮುಗಿಸುವಿರಿ. ಈ ಮೂಲಕ ನಿಮ್ಮನ್ನು ವಿರೋಧಿಸುತ್ತಿದ್ದವರ ಮನದಲ್ಲೂ ಕೂಡಾ ಸಂತಸ ಸಂಭ್ರಮವನ್ನುಂಟು ಮಾಡುವಿರಿ. ಸಹನೆಯಿಂದ ಕೆಲ ಸ್ಥಳಗಳಲ್ಲಿ ವಿಶೇಷ ಜನಪ್ರಿಯತೆಯನ್ನು ಗಳಿಸುವಿರಿ. ಹಾಗಾಗಿ ಬರಬೇಕಾಗಿದ್ದ ಹಣವು ಶೀಘ್ರದಲ್ಲಿ ದೊರೆಯುವುದು. ಶುಭದಿನ: 12. ಆಂಜನೇಯ ಸ್ತೋತ್ರವನ್ನು ತಪ್ಪದೆ ಪಠಿಸಿ.




ಮಕ್ಕಳೊಂದಿಗೆ ಸಮಯ ಕಳೆಯುವುದು ಮುಖ್ಯ. ಕೇವಲ ಒಂದೇ ಒಂದು ಉತ್ತಮ ಕೆಲಸದಿಂದ ಕೆಲಸದಲ್ಲಿ ನಿಮ್ಮ ಶತ್ರುಗಳು ನಿಮ್ಮ ಸ್ನೇಹಿತರಾಗಬಹುದು. ನೀವು ಸಾಕಷ್ಟು ಆಸಕ್ತಿದಾಯಕ ಆಮಂತ್ರಣಗಳನ್ನು ಪಡೆಯುತ್ತೀರಿ. ಒಂದು ಅಚ್ಚರಿಯ ಕೊಡುಗೆಯೂ ನಿಮಗೆ ಸಿಗಬಹುದು. ನಿಮ್ಮ ಸಂಗಾತಿ ನಿಮ್ಮ ಬೇಸರ ಮಾಡಬಹುದು; ತಾಳ್ಮೆ ಕಳೆದುಕೊಳ್ಳಬೇಡಿ. ಶುಭದಿನ: 11. ಹನುಮಾನ್ ಚಾಲೀಸ್ ಓದಿರಿ.




ನಿಮ್ಮ ವೃತ್ತಿ ಜೀವನದ ಬಗ್ಗೆ ಸಾಕಷ್ಟು ಗಂಭೀರವಾಗಿ ಕೆಲಸ ಮಾಡುವಿರಿ ಮತ್ತು ಏನಾದರೂ ವಿಶೇಷವಾದುದನ್ನು ಸಾಧಿಸುವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ ಆದರೆ ನಿಮ್ಮ ಖರ್ಚುಗಳು ಜಾಸ್ತಿಯಾಗುವ ಸಾಧ್ಯತೆಯಿರುತ್ತದೆ. ಸ್ನೇಹಿತರು ನಿಜವಾಗಿಯೂ ಈ ಸಂದರ್ಭದಲ್ಲಿ ಸಹಾಯ ಮಾಡುವರು. ಸಮಾಜದಲ್ಲಿ ನಿಮ್ಮ ಪ್ರತಿಷ್ಠೆ ಹೆಚ್ಚಾಗುವುದು. ಶುಭದಿನ 14. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.